ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಉಡುಪಿ.

ಸಿ.ಸಿಃ 1379/2024
ಚಾ. ಸಾ 07
ಪ್ರಾ.ಸಾ 06

| | | |
|---|---|---|
| ಸಾಕ್ಷಿದಾರರ ಹೆಸರು | : | ಶಶಿದರ್ |
| ತಂದೆಯ ಹೆಸರು | : | ಕುಂಚ |
| ವಯಸ್ಸು | : | 48 |
| ಉದ್ಯೋಗ | : | ಹೆಚ್ ಸಿ , ಮಣಿಪಾಲ ಪೊಲೀಸ್ ಠಾಣೆ |
| ವಾಸಸ್ಥಳ | : | ಕೊರಂಗ್ರಪಾಡಿ |

ದಿನಾಂಕಃ 01-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ನಾನು 2020 ರಿಂದ 2025 ರವರೆಗೆ ಮುಖ್ಯ ಪೇದೆಯಾಗಿ ಮಲ್ಪೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

30-06-2020 ರಂದು ನಾನು ಹಗಲು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ 1 ರವರು ಅಜ್ಜರುಕಾಡು ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಗ್ಗೆ ಸೂಚನೆಯನ್ನು ಆಸ್ಪತ್ರೆಯವರು ಕಳುಹಿಸಿದ ಮೇರೆಗೆ ಅದನ್ನು ಸ್ವೀಕರಿಸಿ 6.30 ರ ಸಮಯದಲ್ಲಿ ಆಸ್ಪತ್ರೆಗೆ ತೆರಳಿ ಗಾಯಾಳು ಚಾಸಾ 1 ರವರು ನೀಡಿದ ದೂರನ್ನು ಸ್ವೀಕರಿಸಿ ಪೊಲೀಸ್ ಠಾಣೆಗೆ ಬಂದು ಪ್ರಥಮ ವರ್ತಮಾನ ವರದಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ . ದೂರನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು . ಪ್ರಥಮ ವರ್ತಮಾನ ವರದಿಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು .03-07-2020 ರಂದು ಪಿರ್ಯಾದಿ ತೋರಿಸಿ ಕೊಟ್ಟ ಸ್ಥಳವನ್ನು ಪಂಚರ ಸಮಕ್ಷಮ ಬೆಳಿಗ್ಗೆ 10 ರಿಂದ 10.30 ರ ಸಮಯದಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ . ಪಂಚನಾಮೆಯನ್ನು ಈಗಾಗಲೇ ನಿಪಿ 2 ಎಂದು ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ 2 ಡಿ ಎಂದು ಗುರುತಿಸಲಾಯಿತು .

ಅದೇ ಸಮಯದಲ್ಲಿ ಚಾಸಾ 2 ರಿಂದ 5 ರವರ ಹೇಳಿಕೆಗಳನ್ನುಪಡೆದಿರುತ್ತೇನೆ . ದಿ 20-07-2020 ರಂದು ಹಲ್ಲೆಗೆ ಉಪಯೋಗಿಸಿದ ಆಯುದಗಳನ್ನು ಹಾಜರುಪಡಿಸುವಂತೆ ಆರೋಪಿ ಕಾಳು ಮತ್ತು ಹೊನ್ನಯ್ಯಗೆ ನೋಟಿಸು ಜಾರಿ

ಮಾಡಿರುತ್ತೇನೆ . 10-09-2020 ರಂದು ವೈದ್ಯರಿಂದ ಪಿರ್ಯಾದುದಾರರ ಗಾಯದ ದೃಢಪತ್ರವನ್ನು ಸ್ವೀಕರಿಸಿರುತ್ತೇನೆ . ಅದನ್ನು ಈಗಾಗಲೇ ನಿಪಿ3 ಎಂದು ಗುರುತಿಸಿಲಾಗಿದೆ ., ಸಾಕ್ಷಿ ಸಹಿಯನ್ನು ನಿಪಿ 3 ಬಿ ಎಂದು ಗುರುತಿಸಲಾಯಿತು .

19-02-2021 ರಂದು ಪ್ರಕರಣದ ಆರೋಪಿ ಅಣ್ಣಯ್ಯ ಕೃತ್ಯಕ್ಕೆ ಬಳಸಿದ ಕತ್ತಿ ಮತ್ತು ಚೂರಿಯನ್ನು ಪೊಲೀಸ್ ಠಾಣೆಗೆ ತಂದು ಹಾಜರುಪಡಿಸಿದ್ದು ಪಂಚರ ಸಮಕ್ಷಮ ಸ್ವತ್ತು ಸ್ವಾಧೀನ ಮಹಜರು ಜರುಗಿಸಿ ಸ್ವತ್ತನ್ನುವಶಪಡಿಸಿಕೊಂಡಿರುತ್ತೇನೆ . ಸದ್ರಿ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ 5 ಎಂದು ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ5 ಎ ಎಂದು ಗುರುತಿಸಲಾಯಿತು . ವಶಪಡಿಸಿಕೊಂಡ ಕತ್ತಿ ಮತ್ತು ಚೂರಿಯನ್ನು ನೋಡಿದರೇ ಗುರುತಿಸುತ್ತೇನೆ ಅದನ್ನು ಈಗಾಗಲೇ ಎಂ ಒ 1 ಮತ್ತು 2 ಎಂದು ಗುರುತಿಸಲಾಗಿದೆ. ನಂತರ 23-01-2021 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತರಿಂದ ಯಾವುದೇ ಮುದ್ದೆ ಮಾಲನ್ನು ಜಪ್ತಿಪಡಿಸಿಕೊಂಡಿಲ್ಲ ಮತ್ತು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಅಕ್ಕಪಕ್ಕದ ಮನೆಯ ನಿವಾಸಿಗಳನ್ನು ವಿಚಾರಣೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಸಾಕ್ಷಿದಾರರು ಪಿರ್ಯಾದಿಯ ಸಂಬಂಧಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ಎಂದು ತಿಳಿದಿದ್ದರೂ ಕೂಡ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.